**the gradual fading of the colours in the sky, and the emergence of the first single star at dusk. – R.K. Narayan in 'My Days')**

ಇಷ್ಟಕ್ಕೇ ನನ್ನ ಮತ್ತು ಕುಕ್ಕಹಳ್ಳಿ ಕೆರೆ ಸಂಬಂಧ ಮುಗಿಯಲಿಲ್ಲ. ನಾನು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ, ಮೈಸೂರು ವಿಶ್ವವಿದ್ಯಾಲಯ ಬಡ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ನೆರವಾಗಲೆಂದು 'ಗಳಿಕೆ ಮತ್ತು ಕಲಿಕೆ' (Earn and Learn Scheme) ಎಂಬ ಒಂದು ಯೋಜನೆಯನ್ನು ಜಾರಿಗೆ ತಂದಿತು. ವಿಶ್ವವಿದ್ಯಾಲಯದ ವಿದ್ಯಾರ್ಥಿ ವಿಭಾಗದ ಡೀನ್ ಆಗಿದ್ದ, ಅಕ್ಷರಶಃ ಗಾಂಧೀವಾದಿಯಾಗಿದ್ದ ಉ.ಕಾ. ಸುಬ್ಬರಾಯಾಚಾರ್ ಅವರು ಆ ಯೋಜನೆಯ ಮುಖ್ಯಸ್ಥರಾದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತಂದರು. ಅದರಲ್ಲಿ ನನ್ನ ಅನೇಕ ಸಹಪಾಠಿಗಳು ಭಾಗಿಯಾದರು. ನಾನೂ ಭಾಗಿಯಾದೆ. ಆ ಯೋಜನೆಯ ಒಂದು ಕಾರ್ಯಕ್ರಮವೆಂದರೆ– ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಕುಕ್ಕರಹಳ್ಳಿ ಕೆರೆ ಮತ್ತು ಮಾನಸಗಂಗೋತ್ರಿಯ ಆವರಣದಲ್ಲಿ ಗಿಡಗಳನ್ನು ನೆಡುವುದು. ಅದಕ್ಕಾಗಿ ಎರಡು ಅಡಿ ಆಳ ಮತ್ತು ಎರಡು ಅಡಿ ವ್ಯಾಸದ ಗುಂಡಿಯನ್ನು ತೆಗೆಯಬೇಕಿತ್ತು. ಹಾಗೆ ತೆಗೆದ ಒಂದು ಗುಂಡಿಗೆ ಎರಡು ರೂಪಾಯಿ ಎಂದು ನಿಗದಿಪಡಿಸಲಾಗಿತ್ತು. ಒಬ್ಬ ವಿದ್ಯಾರ್ಥಿ ಎರಡು ಗಂಟೆಯ ಅವಧಿಯಲ್ಲಿ ಎಷ್ಟು ಗುಂಡಿ ತೋಡುತ್ತಿದ್ದನೋ ಅಷ್ಟು ದುಡ್ಡು ಅವನ ಲೆಕ್ಕಕ್ಕೆ ಜಮಾ ಆಗುತ್ತಿತ್ತು. ಆ ಯೋಜನೆಯಲ್ಲಿ ನಾನು ಒಂದೆರಡು ತಿಂಗಳು ಕೆಲಸ ಮಾಡಿದೆ. ಆಮೇಲೆ, ಪ್ರಾಥಮಿಕ ತರಗತಿಯ ಮಕ್ಕಳಿಗೆ ಮನೆಪಾಠ ಹೇಳಿಕೊಡಲು ಅವಕಾಶ ಸಿಕ್ಕಿದ್ದರಿಂದ ಮತ್ತು ಆ ಸಂಪಾದನೆ ಇದಕ್ಕಿಂತ ಹೆಚ್ಚಿದ್ದರಿಂದ ಹಾಗೂ ಬೆಳಗಿನ ಹೊತ್ತು ಸಂಸ್ಕೃತ ಕಲಿಯಲು ಚಾಮರಾಜ ಸಂಸ್ಕೃತ ಪಾಠಶಾಲೆಗೆ ಪ್ರವೇಶ ಪಡೆದಿದ್ದರಿಂದ ನಾನು ಗುಂಡಿ ತೋಡುವ ಕೆಲಸವನ್ನು ಬಿಟ್ಟೆ. ನನಗೆ ಚೆನ್ನಾಗಿ ನೆನಪಿರುವಂತೆ ಕೆರೆಯ ಆವರಣದಲ್ಲಿರುವ ನೀಲಗಿರಿ ತೋಪು ಮತ್ತು ಗಂಗೋತ್ರಿಯಲ್ಲಿ ಅಲ್ಲಲ್ಲಿ ಬೆಳೆದು ನಿಂತಿರುವ ನೀಲಗಿರಿ ಮರಗಳನ್ನು ನೆಟ್ಟು ಬೆಳೆಸಿದವರು ಅಂದಿನ ವಿದ್ಯಾರ್ಥಿಗಳು. ಅದರಲ್ಲಿ ನನ್ನದೂ ಕೊಂಚ ಪಾಲಿದೆ. ಅನಂತರ, ಕೆರೆ ಮತ್ತು ಗಂಗೋತ್ರಿ ಈ ಎರಡರಲ್ಲೂ ಹೇರಳವಾಗಿ ಗಿಡ ಮರಗಳನ್ನು ನೆಟ್ಟಿದ್ದು ದೇ. ಜವರೇಗೌಡರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ. ಜವರೇಗೌಡರಂತು ಖುದ್ದು ತಾವೇ ನಿಂತು ಗಿಡಮರಗಳನ್ನು ನೆಡುವ ಮತ್ತು ತೋಟಗಾರಿಕೆಯನ್ನು ವೃದ್ಧಿಪಡಿಸುವ ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದುದು ಅವರ ಹಸಿರು ಪ್ರೇಮವನ್ನು ಎದ್ದು ತೋರಿಸುತ್ತಿತ್ತು ಎಂದೇ ಹೇಳಬಹುದು. ಅವರ ಇತರ ವ್ಯಕ್ತಿತ್ವದ ಬಗ್ಗೆ ನಾನಿಲ್ಲಿ ಹೇಳುತ್ತಿಲ್ಲ. ಇದೇನೆ ಇರಲಿ, ಕುಕ್ಕರಹಳ್ಳಿ ಕೆರೆಯ ಅಂಗಳದಲ್ಲಿ ಬೆಳೆದು, ಬೆಳೆಯುತ್ತಿರುವ ಗಿಡಮರಗಳಿಗೂ ನನಗೂ ನನ್ನ ಕೆಲವು ಗೆಳೆಯರಿಗೂ ಭಾವನಾತ್ಮಕ ಸಂಬಂಧವೊಂದು ಇದ್ದೇ ಇದೆ. ಈ ಕಾರಣದಿಂದಲೇ ಬಿ.ವಿ. ಕಾರಂತರು ರಂಗಾಯಣದ ನಿರ್ದೇಶಕರಾಗಿದ್ದಾಗ 'ವನರಂಗ'ದ ನಿರ್ಮಾಣಕ್ಕೆ ಮುಂದಾದಾಗ ಅಲ್ಲಿನ ಮರಗಳಿಗೆ ಕೊಡಲಿ ಬೀಳುವುದೆಂದು ನಾನೂ ಸೇರಿದಂತೆ ಕೆಲವು ಪರಿಸರವಾದಿಗಳು ತಕರಾರು ಎತ್ತಿದೆವು. ಅದಕ್ಕೆ ಕಾರಂತರು ನಯವಾಗಿ ಉತ್ತರಿಸಿದರಾದರೂ ಮುಂದೆ ಒಂದೆರಡು ಮರಗಳನ್ನು ಮಗುಂ ಆಗಿ ಸವರಲಾಯಿತು. ನಮ್ಮ ದೇಶದಲ್ಲಿ ಸಾಂದರ್ಭಿಕವಾಗಿ ನಡೆದುಕೊಳ್ಳುವವರೇ ಹೆಚ್ಚು ಮಂದಿ ಇದ್ದಾರಲ್ಲದೆ, ಜೀವನ ಬದ್ಧತೆ ಇರುವವರ ಸಂಖ್ಯೆ ತೀರ ಕಮ್ಮಿ ಎಂದೇ ನನ್ನ ಈವರೆಗಿನ ಅನುಭವ. ಇದಿರಲಿ. ಮತ್ತೆ ಮೂಲ ಸಂಗತಿಗೆ ಬರೋಣ.

ಮಹಾರಾಜ ಕಾಲೇಜಿನಲ್ಲಿ ಮೊದಲನೆಯ ಬಿ.ಎ. ವಿದ್ಯಾರ್ಥಿಯಾಗಿದ್ದಾಗ, ಸೌಂದರ್ಯೋಪಾಸಕ ಕವಿ ಜಿ.ಎಸ್. ಶಿವರುದ್ರಪ್ಪನವರು ನನಗೆ ಅಧ್ಯಾಪಕರಾಗಿದ್ದರು. ಅವರು ಕನ್ನಡದ ಮೇಲುಗವಿ ಪು.ತಿ.ನ. ಅವರ 'ಅಹಲ್ಯೆ' ನಾಟಕವನ್ನು ಬೋಧಿಸುತ್ತಿದ್ದರು. ನಾಟಕದಲ್ಲಿ ಬರುವ 'ಹೊಂಗೆ ಹೂವಿಂಗ್ಯೆದ ರಂಗವಲ್ಲಿಯ ತೆರದಿ' ಎಂಬ ಸಾಲಿನ ಸೊಬಗನ್ನು ವಿವರಿಸುತ್ತ, ಶಿವರುದ್ರಪ್ಪನವರು